1	2	3	4	5
4.	ಕುಂದಗೋಳ	1.55	1.55	18
5.	ಶಿಗ್ಗಾವಿ	2.60	2.60	30
6.	ಗದಗ್ (ನಗರ)	1.25	1.25	25
7.	ಮುಂಡರಗಿ	1.60	1.60	32
8.	ನರಗುಂದ	1.45	1.45	29
9.	ನವಲಗುಂದ	1.45	1.45	29
10.	ರೋಣ	1.10	1.10	22
11.	ಶಿರಹಟ್ಟಿ	0.60	0.60	09
12.	ಬ್ಯಾಡಗಿ	1.40	1.40	26
13.	ಹಾನಗಲ್	1.75	1.75	35
14.	ಹಾವೇರಿ	1.75	1.75	35
15.	ಹಿರೇಕೆರೂರು	0.70	0.70	14
16.	ರಾಣೆಬೆನ್ನೂರು	1.75	1.75	19
17.	ಸವಣೂರು	0.25	0.25	05
18.	ಹುಬ್ಬಳ್ಳಿ (ಗ್ರಾಮಾಂತರ)	1.40	1.40	18
19.	ಗದಗ್ (ಗ್ರಾಮಾಂತರ)	1.50	1.50	30
	ಒಟ್ಟು	**29.00**	**29.00**	**477**

ಮಾಗಡಿ ತಾಲ್ಲೂಕು ವೈ.ಜಿ. ಗುಡ್ಡ ಕೆರೆಯ ಅರಣ್ಯ ಪ್ರದೇಶದ ಕಲ್ಲುಗಳ ಅಕ್ರಮ ಸಾಗಾಣಿಕೆ.

1784 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಮಾಗಡಿ ತಾಲ್ಲೂಕು ಮೂಡಬಾಳ ಹೋಬಳಿ ವೈ.ಜಿ.ಗುಡ್ಡೆಕೆರೆಯ ಪ್ರದೇಶದಲ್ಲಿ ಬರುವ ಅರಣ್ಯ ಪ್ರದೇಶದಲ್ಲಿನ ಕಲ್ಲುಗಳನ್ನು ಅನಧಿಕೃತವಾಗಿ ಹಾಗೂ ಅಕ್ರಮವಾಗಿ ಸಾಗುಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*
2. *ಹಾಗಿದ್ದಲ್ಲಿ, ಅಕ್ರಮ ಸಾಗಾಣಿಕೆದಾರರ ಹೆಸರುಗಳನ್ನು ತಿಳಿಸುವುದು, ಇದರ ವಿರುದ್ಧ ಹಾಗೂ ಅಕ್ರಮ ಸಾಗಾಣಿಕೆ ನೆರವಾದ ಅಧಿಕಾರಿಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಗುರಾಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

1. ಮಾಗಡಿ ತಾಲ್ಲೂಕು ಮೂಡಬಾಳ್ ಹೋಬಳಿ ವೈ.ಜಿ. ಗುಡ್ಡೆ ಕೆರೆಯ ಪ್ರದೇಶದಲ್ಲಿ ಬರುವ ಅರಣ್ಯ ಪ್ರದೇಶದಲ್ಲಿನ ಕಲ್ಲುಗಳನ್ನು ಅನಧಿಕೃತವಾಗಿ ಸಾಗಿಸುತ್ತಿರುವುದು ಕಂಡುಬಂದಿಲ್ಲ.

2. ಅನಧಿಕೃತ ಕಲ್ಲು ಸಾಗಾಣಿಕೆ ಇಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾಗಡಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು.

1785 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಸಂಖ್ಯೆ ಎಷ್ಟು ? (ಪ್ರಾಥಮಿಕ ಆರೋಗ್ಯ ಕೇಂದ್ರವಾರುಗಳಲ್ಲಿ ಖಾಲಿ ಇರುವ ಹುದ್ದೆಯ ಪೆಟ್ಟಿ ನೀಡುವುದು?

ಆ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಇ) ಈ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಇದ್ದಕ್ಕೆ ಸರ್ಕಾರದ ಕ್ರಮವೇನು?

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹುದ್ದೆ ಖಾಲಿ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮಾಗಡಿ ತಾಲ್ಲೂಕಿನ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆ.

1786 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಒಟ್ಟು ಹುದ್ದೆಗಳೆಷ್ಟು? (ಶಾಲಾವಾರು ಖಾಲಿ ಇರುವ ಶಿಕ್ಷಕರ ಸಂಖ್ಯೆ ನೀಡುವುದು)